# ವಿದ್ಯುಚ್ಛಕ್ತಿ ಲೋಕಪಾಲರ ಸಮಕ್ಷಮದಲ್ಲಿ

ಸಂಖ್ಯೆ: 16, ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, (ಜೈನ್ ಆಸ್ಪತ್ರೆ ಹಿಂಭಾಗ),
ವಸಂತನಗರ, ಬೆಂಗಳೂರು–560052.

**ಉಪಸ್ಥಿತಿ: ಶ್ರೀಮತಿ ಆರ್. ಶಾರದ,**
**ವಿದ್ಯುಚ್ಛಕ್ತಿ ಲೋಕಪಾಲರು**

**ಪ್ರಕರಣ ಸಂಖ್ಯೆ: OMB/H/G-432/2021**

**ಆದೇಶ ದಿನಾಂಕ: 02/02/2022**

ಶ್ರೀ ಅಶೋಕ್ ಆರ್. ನೀಲಿ,
ಮೆ. ಮಂತ್ರ ರೆಸಿಡೆನ್ಸಿ,
ಹಳೇ ಬಸ್ ನಿಲ್ದಾಣದ ಹಿಂಭಾಗ,
ಹುಬ್ಬಳ್ಳಿ.

**ಪ್ರತಿನಿಧಿಸುವವರು:**
ಶ್ರೀ ತುಷಾರ್ ಎಂ ಬದ್ದಿ
ಅರಿಹಂತ ಪಾರ್ಕ್, ಕೇಶ್ವಾಪುರ ,
ಹುಬ್ಬಳ್ಳಿ – 580023. – ದೂರುದಾರರು/ಮೇಲ್ಮನವಿದಾರರು

V/S

1. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನ ನಗರ ಉಪ ವಿಭಾಗ-3, ಹೆಸ್ಕಾಂ,
2ನೇ ಗೇಟ್, ಇನ್‌ಡಸ್ಟ್ರೀಯಲ್ ಎಸ್ಟೇಟ್,
ಹುಬ್ಬಳ್ಳಿ.

**ಪ್ರತಿನಿಧಿಸುವವರು:**
ಶ್ರೀ ಹೆಚ್.ವಿ. ದೇವರಾಜ್, ವಕೀಲರು,
ನಂ. 39, ಶಾಪ್ ನಂ. 24,
ಮೆಜನೇನ್ ಫ್ಲೋರ್,
ಎ.ಎಸ್.ವಿ.ಎನ್.ವಿ. ಭವನ,
ಕೆ.ಜಿ. ರಸ್ತೆ,
ಬೆಂಗಳೂರು-560009.

2. ಅಧ್ಯಕ್ಷರು,
ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ,
ಕಾರ್ಯ ಮತ್ತು ಪಾಲನ ವೃತ್ತ,
ಶಿವಗಂಗಾ ಲೇಔಟ್, ಕೇಶ್ವಾಪುರ,
ಹುಬ್ಬಳ್ಳಿ – 560023. – ಪ್ರತಿವಾದಿಗಳು

ಈ ಮೇಲ್ಮನವಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ (ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಮತ್ತು ಲೋಕಪಾಲ) ನಿಯಮಗಳ ಅಡಿಯಲ್ಲಿ, ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಹುಬ್ಬಳ್ಳಿ ನಗರ, ಪ್ರಕರಣ ಸಂಖ್ಯೆ 253/2021 ಆದೇಶ ಸಂಖ್ಯೆ: ಅಇಂ(ವಿ)/ ಉಲೆನಿ/ ಹಿಸ-1/ಗ್ರಾಕುಂಕೊನಿವೇ/ ಕಡತ-253/2021/CYS-11, ಇವರ ಆದೇಶ ದಿನಾಂಕ 07.04.2021ರ ವಿರುದ್ಧ ದಾಖಲಿಸಲಾಗಿದೆ.

1) ಈ ಪ್ರಕರಣದ ಸಾರಾಂಶವೇನೆಂದರೆ, ದೂರುದಾರ/ಅಪೀಲುದಾರರು ವಿದ್ಯುತ್ ಸ್ಥಾವರ ಸಂಖ್ಯೆ HT-294 ನೊಂದಾಯಿತ ವಿದ್ಯುತ್ ಗ್ರಾಹಕರಾಗಿದ್ದು, ಸದರಿ ಸ್ಥಾವರವು 100 KVA ವಿದ್ಯುತ್ ಮಂಜೂರಾತಿಯೊಂದಿಗೆ HT-2(b) ಜಕಾತಿ ಅಡಿಯಲ್ಲಿ ಸಂಪರ್ಕಿತಗೊಂಡಿರುತ್ತದೆ. ಇದೊಂದು ವಾಣಿಜ್ಯ ಸ್ಥಾವರವಾಗಿದ್ದು ಗ್ರಾಹಕರು ತಾವು ಬಳಸುವ ವಿದ್ಯುತ್ ಬಳಕೆಗೆ ಅನುಗುಣವಾಗಿ ಹಾಗೂ ಕಾಲ ಕಾಲಕ್ಕೆ ಕ್ರಮವಾಗಿ ನೀಡುತ್ತಿರುವ ವಿದ್ಯುತ್ ಬಿಲ್ಲುಗಳ ಮೊತ್ತವನ್ನು ಪಾವತಿ ಮಾಡುತ್ತಿರುತ್ತಾರೆ. ಈ ರೀತಿ ಇರುವಾಗ್ಯೆ ದಿನಾಂಕ 21.10.2020ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) HTMR ಉಪವಿಭಾಗ, ಹೆಸ್ಕಾಂ, ಹುಬ್ಬಳ್ಳಿ ಇವರು ಸ್ಥಳಕ್ಕೆ ಬಂದು ಸ್ಥಾವರದ ಪರಿಶೀಲನೆ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಸದರಿ ಸ್ಥಾವರಕ್ಕೆ ಅಳವಡಿಸಿರುವ ಮಾಪಕವು 50% ನಿಧಾನ ಗತಿಯಲ್ಲಿ ತಿರುಗುತ್ತಿದೆ ಎಂಬ ಕಾರಣಕ್ಕೆ ದಿನಾಂಕ 21.02.2020 ರಿಂದ 21.10.2020ರ ಅವಧಿಗೆ ಹಿಂಬಾಕಿ ಮೊತ್ತ ಎಂಬುದಾಗಿ ಒಂದನೇ ಪ್ರತಿವಾದಿಯು ರೂ. 5,96,010/-ಗಳಿಗೆ ಪ್ರಾರಂಭಿಕ ಡಿಮಾಂಡ್ ನೋಟಿಸನ್ನು (Demand Notice) ನೀಡಿರುತ್ತಾರೆ. ಸದರಿ ಡಿಮಾಂಡ್ ನೋಟಿಸು (Demand Notice) 20.11.2020ರಂದು

ಅಪೀಲುದಾರರಿಗೆ ತಲುಪಿರುತ್ತದೆ. ಆದರೆ ಒಂದನೇ ಪ್ರತಿವಾದಿಯು ಕ್ಲಾಸ್ 42.06(e) ಪ್ರಕಾರ ಡಿಮಾಂಡ್ ನೋಟಿಸ್ (Demand Notice) ನೀಡುವ ಮೊದಲು ಮಾಡಬೇಕಾದ ಮಹಜರ್ ಕ್ರಮವನ್ನು ಜರುಗಿಸಿರುವುದಿಲ್ಲ ಅಥವಾ 3ನೇ ಪಾರ್ಟಿ ಏಜೆನ್ಸಿರವರಿಗೆ (3rd Party Agency) ಪರಿಶೀಲನೆಗಾಗಿ ಮಾಪಕವನ್ನು ಒಪ್ಪಿಸಿರುವುದಿಲ್ಲ. MRT ವರದಿಯ ಪ್ರಕಾರ ಅಪೀಲುದಾರರ ವಿದ್ಯುತ್ ಸ್ಥಾವರದ ಮಾಪಕವು 50% ನಿಧಾನ ಗತಿಯಲ್ಲಿ ತಿರುಗುತ್ತಿದೆ ಎಂದು ಪರಿಗಣಿಸಿ ಬಿಲ್ಲನ್ನು ನೀಡಿರುತ್ತಾರೆ.

2) ನಂತರ ಒಂದನೇ ಪ್ರತಿವಾದಿಯು ಪರಿಷ್ಕೃತ ಹಿಂಬಾಕಿ ಮೊತ್ತದ ಬಿಲ್ ಹಣ ರೂ. 4,22,228/-ಗಳನ್ನು ಪಾವತಿಸುವಂತೆ ಆದೇಶಿಸಿರುತ್ತಾರೆ. ಈ ರೀತಿ ಸ.ಕಾ.ನಿ.ಇಂ(ವಿ), ಕಾ ಮತ್ತು ಪಾ ಶಹರ ಉಪವಿಭಾಗ-3, ಹೆಸ್ಕಾಂ, ಹುಬ್ಬಳ್ಳಿಯರು ನೀಡಿದ ಅಂತಿಮ ಆದೇಶಕ್ಕೆ ಅಪೀಲುದಾರರು ಆಕ್ಷೇಪಣೆಯನ್ನು ವ್ಯಕ್ತಪಡಿಸಿ ಸದರಿ ಸ್ಥಾವರಕ್ಕೆ ವಿಧಿಸಿರುವ ಅಂತಿಮ ಹಿಂಬಾಕಿ ಮೊತ್ತದ ಬಿಲ್ಲನ್ನು ಹಿಂಪಡೆಯುವಂತೆ ಆದೇಶವನ್ನು ಹೊರಡಿಸಲು ಹಾಗೂ ಸದರಿ ಪ್ರಕರಣ ಅಂತಿಮಗೊಳ್ಳುವವರೆಗೂ ಸದರಿ ಸ್ಥಾವರದ ವಿದ್ಯುತ್ ಕಡಿತಗೊಳಿಸಬಾರದೆಂದು ವಿನಂತಿಸಿ ಅಪೀಲುದಾರರ ಪರ ಅವರ ಪ್ರತಿನಿಧಿಯವರು ಎರಡನೇ ಪ್ರತಿವಾದಿಯ ಮುಂದೆ ದೂರನ್ನು ಸಲ್ಲಿಸಿರುತ್ತಾರೆ. ತದನಂತರ ಎರಡನೇ ಪ್ರತಿವಾದಿಯು ಉಭಯತ್ರರರ ವಾದವಿವಾದವನ್ನು ಆಲಿಸಿ ಅಂತಿಮವಾಗಿ ಪ್ರಕರಣ ಸಂಖ್ಯೆ 253/2021 ಯಲ್ಲಿ ದಿನಾಂಕ 07.04.2021ರಂದು ಆದೇಶವನ್ನು ಹೊರಡಿಸುತ್ತಾ ಅಪೀಲುದಾರರ ಮನವಿಯನ್ನು ತಿರಸ್ಕರಿಸಿರುತ್ತಾರೆ ಹಾಗೂ ಲೈಸೆನ್ಸುದಾರರು ಗ್ರಾಹಕರಿಗೆ ಆಕರಿಸಿರುವ ಮೊತ್ತವನ್ನು ನಿಯಮಾನುಸಾರ ಪಾವತಿಸಿಕೊಳ್ಳುವ ಕ್ರಮ ಜರುಗಿಸಲು ಆದೇಶಿಸಿರುತ್ತಾರೆ. ಸದರಿ ಆದೇಶದಿಂದ

ನೊಂದ ಅಪೀಲುದಾರರು ಪ್ರಸ್ತುತ ಅಪೀಲನ್ನು ಈ ಕೆಳಕಂಡ ಕಾರಣಗಳ ಅಡಿಯಲ್ಲಿ ಸಲ್ಲಿಸಿರುತ್ತಾರೆ.

## ಕಾರಣಗಳು

3) ಎರಡನೇ ಪ್ರತಿವಾದಿಯು Conditions of Supply of Electricity of Distributions Licensees in the State of Karnataka Clause 27.01ರಲ್ಲಿ ಪ್ರಧತ್ತವಾದ ಅಂಶಗಳನ್ನು ಪರಿಶೀಲಿಸಿರುವುದಿಲ್ಲವೆಂದೂ, 3ನೇ ಪಾರ್ಟಿ ಏಜೆನ್ಸಿ (3rd Party Agency) ಮೂಲಕ ಮಾಪಕದ ತಪಾಸಣೆ ಆಗಬೇಕಿತ್ತೆಂದು ಆದರೇ ಆ ರೀತಿ ಆಗಿರುವುದಿಲ್ಲವೆಂದು ನುಡಿದಿರುತ್ತಾರೆ. ಎರಡನೇ ಪ್ರತಿವಾದಿಯು ದೋಷಪೂರಿತ ಮಾಪಕದ ಸತ್ಯಾಸತ್ಯತೆಯನ್ನು ಪರಿಶೀಲನೆ ಮಾಡಲು Chief Electrical Inspectorateರನ್ನು ನೇಮಕ ಮಾಡಬೇಕಿತ್ತೆಂದು ತದ ನಂತರ ಅವರಿಂದ ವರದಿಯನ್ನು ಪಡೆದು ವಿದ್ಯುತ್ ಬಳಕೆ ಎಷ್ಟಾಗಿತ್ತು ಎಂಬುದರ ಬಗ್ಗೆ ನಿರ್ದಾರಣೆ ಮಾಡಬೇಕಿತ್ತೆಂದು ಇದಕ್ಕೆ ಸಂಬಂಧಿಸಿದಂತೆ K.E.R.C/COS/D/07/10 ದಿನಾಂಕ 01.07.2010 ಪ್ರಕಟಣೆ 22.07.2010ರ ಕರ್ನಾಟಕ ರಾಜ್ಯದ ಗೆಜೆಟ್ ನೋಟಿಫಿಕೇಷನ್ (Gazette Notification) ಇದ್ದರೂ ಅದನ್ನು ಕೂಡ ಎರಡನೇ ಪ್ರತಿವಾದಿಯು ಪರಿಶೀಲನೆ ಮಾಡಿಲ್ಲವೆಂದು ಮತ್ತು ದೋಷಪೂರಿತ ಮೀಟರನ್ನು ನಿಗಧಿತ ಸಮಯದ ಒಳಗೆ ಬದಲಾಯಿಸುವುದರಲ್ಲಿಯು ಸಹ ಒಂದನೇ ಪ್ರತಿವಾದಿಯು ನಿರ್ಲಕ್ಷತನ ತೋರಿದ್ದನ್ನು ಎರಡನೇ ಪ್ರತಿವಾದಿಯು ಪರಿಶೀಲಿಸಿಲ್ಲವೇಂದು ಅಷ್ಟೇ ಅಲ್ಲದೇ Conditions of Supply of Electricity of Distributions Licensees in the State of Karnataka Clause 27.04(i)ರಲ್ಲಿನ ಅಂಶಗಳನ್ನು ಸಹ ಪರಿಶೀಲನೆ ಮಾಡದೆಯೇ ಒಂದನೇ ಪ್ರತಿವಾದಿಯು ರೂ. 5,92,010/- ಮೊತ್ತದ ಹಣವನ್ನು ಹಿಂಬಾಕಿ ಎಂದು ನಿರ್ಧರಿಸಿ ವಸೂಲಾತಿಗಾಗಿ ಡಿಮಾಂಡ್

ನೋಟಿಸ್ (Demand Notice) ಕಳಿಸಿದ್ದು ತದನಂತರ ಪರಿಷ್ಕೃತ ಡಿಮಾಂಡ್ ನೋಟಿಸ್ (Demand Notice) ಎಂದು ಹೇಳಿ ರೂ. 4,22,228/- ಹಣವನ್ನು ಪಾವತಿ ಮಾಡುವಂತೆ ಅಂತಿಮ ನೋಟಿಸು ನೀಡಿರುವುದನ್ನು ಸಹ ಎರಡನೇ ಪ್ರತಿವಾದಿಯು ಪರಿಶೀಲಿಸಿಲ್ಲವೆಂದು ನುಡಿದಿರುತ್ತಾರೆ. ಇವೆಲ್ಲವನ್ನೂ ಎರಡನೇ ಪ್ರತಿವಾದಿಯ ಮುಂದೆ ದೂರಿನ ಮೂಲಕ ಮಂಡಿಸಿದ್ದರೂ ಸಹ ಎರಡನೇ ಪ್ರತಿವಾದಿಯು ಈ ಯಾವುದೇ ಅಂಶಗಳನ್ನು ಪರಿಶೀಲಿಸದೇ ದೂರನ್ನು ಪುರಸ್ಕರಿಸದೇ ವಜಾ ಮಾಡಿರುವುದು ಸರಿಯಲ್ಲವೆಂದು ಈ ಎಲ್ಲಾ ಕಾರಣಗಳಿಂದ ಪ್ರಸ್ತುತ ಅಪೀಲನ್ನು ಸಲ್ಲಿಸಿರುತ್ತೇವೆಂದು ಅಪೀಲಿನಲ್ಲಿ ಕೋರಿದಂತೆ ಆದೇಶ ಹೊರಡಿಸಬೇಕೆಂದು ಪ್ರಾರ್ಥನೆ ಮಾಡಿರುವುದು ಕಂಡು ಬರುತ್ತದೆ.

4) ಅಪೀಲನ್ನು ನೋಂದಣಿ ಮಾಡಿಕೊಂಡ ನಂತರ ಈ ಪ್ರಾಧಿಕಾರವು ಉಭಯಪಕ್ಷಕಾರರಿಗೆ ಈ ಪ್ರಾಧಿಕಾರದ ಮುಂದೆ ಹಾಜರಾಗುವಂತೆ ತಿಳುವಳಿಕೆ ನೋಟೀಸನ್ನು ನೀಡಿರುತ್ತದೆ. ಅದರಂತೆ ಮೇಲ್ಮನವಿದಾರರು ತಮ್ಮ ಅಧಿಕೃತ ಪ್ರತಿನಿಧಿರವರ ಮೂಲಕ ಹಾಜರಾಗಿರುತ್ತಾರೆ ಹಾಗೂ ಒಂದನೇ ಪ್ರತಿವಾದಿ ತಾವೇ ಖುದ್ದಾಗಿ ಹಾಜರಾಗಿರುತ್ತಾರೆ ಮತ್ತು ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ.

5) ಸದರಿ ತಕರಾರಿನಲ್ಲಿ ಒಂದನೇ ಪ್ರತಿವಾದಿಯು ಆರ್.ಆರ್. ಸಂಖ್ಯೆ HT-294 ಸ್ಥಾವರದ ಗ್ರಾಹಕರು ಅಪೀಲುದಾರರೆಂದು ದಿನಾಂಕ 09.10.2013 ರಂದು ಸಂಪರ್ಕವನ್ನು ಪಡೆದಿರುತ್ತಾರೆಂದು ತದನಂತರ ದಿನಾಂಕ 21.10.2020ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) HTMR ಉಪವಿಭಾಗ, ಹೆಸ್ಕಾಂ ಹುಬ್ಬಳ್ಳಿ ಇವರು ಸ್ಥಳ ಪರಿಶೀಲನೆ ಮಾಡಿ ಸದರಿ ಸ್ಥಾವರದ ಮಾಪಕವು 50%ರಷ್ಟು ನಿಧಾನಗತಿಯಲ್ಲಿ

ಚಲಿಸುತ್ತಿರುವುದನ್ನು ಖಚಿತ ಪಡಿಸಿಕೊಂಡು ದಿನಾಂಕ 21.10.2020ರಂದು ವರದಿ ಸಲ್ಲಿಸಿರುತ್ತಾರೆಂದು ಹಾಗೂ ವಿದ್ಯುತ್ ಸರಬರಾಜು ಅಧಿನಿಯಮ 42.01ರಿಂದ 42.06ರ ಅಡಿಯಲ್ಲಿ ಕ್ರಮ ಜರುಗಿಸಲು ಸೂಚಿಸಿರುತ್ತಾರೆಂದು, ಇದರಂತೆ ಸಂಬಂಧಿತ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಇವರು ಗ್ರಾಹಕರಿಗೆ ತಾತ್ಕಾಲಿಕ ನೋಟಿಸನ್ನು ನೀಡಿ ಹಿಂಬಾಕಿ ಮೊತ್ತ ರೂ. 5,96,010/-ನ್ನು ಭರಿಸಲು ದಿನಾಂಕ 10.11.2020ರ ನೋಟಿಸ್ ಮೂಲಕ ತಿಳಿಸಿದ್ದರೆಂದು ಸದರಿ ನೋಟಿಸಿಗೆ ಗ್ರಾಹಕರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲವೆಂದು ನುಡಿದಿರುತ್ತಾರೆ.

6) ಮತ್ತೆ ಮುಂದುವರೆದು ಈ ರೀತಿ ಗ್ರಾಹಕರು ತಾತ್ಕಾಲಿಕ ನೋಟಿಸಿಗೆ ಯಾವುದೇ ಆಕ್ಷೇಪಣೆ ಸಲ್ಲಿಸದೇ ಇದ್ದ ಕಾರಣಕ್ಕೆ ಸದರಿ ಹಿಂಬಾಕಿ ಮೊತ್ತವನ್ನು ಪರಿಷ್ಕರಿಸಿ ರೂ. 4,22,228/- ಹಣವನ್ನು 15 ದಿನಗಳ ಒಳಗೆ ಪಾವತಿಸಲು ಅಂತಿಮ ನಿರ್ಧಾರದ ಆದೇಶವನ್ನು ನೀಡಿರುತ್ತಾರೆಂದು, ಆಗ ಗ್ರಾಹಕರು ಈ ಅಂತಿಮ ಆದೇಶಕ್ಕೆ ದಿನಾಂಕ 16.12.2020ರಂದು ಆಕ್ಷೇಪಣೆ ಅರ್ಜಿಯನ್ನು ಸಲ್ಲಿಸಿರುತ್ತಾರೆಂದು ನುಡಿದಿರುತ್ತಾರೆ.

7) ಮತ್ತೆ ಮುಂದುವರೆದು ಗ್ರಾಹಕರು Conditions of Supply of Electricity of Distributions Licensees in the State of Karnataka ಕಂಡಿಕೆ 27.03(1) ಅನ್ವಯ ಮಾಪಕ ನಿಧಾನಗತಿಯಲ್ಲಿ ಚಲಿಸಿದ ಸಂದರ್ಭದಲ್ಲಿ ಗರಿಷ್ಠ 6 ತಿಂಗಳಿಗೆ ಹಿಂಬಾಕಿಯನ್ನು ಪಾವತಿ ಮಾಡಬೇಕು ಎಂಬುದಾಗಿ ಇರುತ್ತದೆಂದೂ ಆದರೂ ವಾಸ್ತವಿಕವಾಗಿ HTMRರವರ ಪತ್ರದ ಅನ್ವಯ ದಿನಾಂಕ 21.02.2020ರಿಂದ 21.10.2020ರವರೆಗೆ ಮಾಪಕವು 50% ರಷ್ಟು ನಿಧಾನಗತಿಯಲ್ಲಿ ಚಲಿಸಿರುತ್ತದೆಂದು ಮತ್ತು ಸದರಿ ಸ್ಥಾವರಕ್ಕೆ ಹೆಚ್‌ಟಿಎಮ್‌ಆರ್ (HTMR)ರವರ ಮಹಜರ್ ವರದಿಯಲ್ಲಿ ಗ್ರಾಹಕರ ರುಜು

ಇರುತ್ತದೆಂದು ಇದರಿಂದ ನಿಯಮಗಳನುಸಾರವಾಗಿ ಹಿಂಬಾಕಿ ಮೊತ್ತವನ್ನು ಆಕರಣೆ ಮಾಡಲಾಗಿದೆಯೆಂದು ನುಡಿದಿರುತ್ತಾರೆ.

8) ಮತ್ತೆ ಮುಂದುವರೆದು ಗ್ರಾಹಕರು ನೀಡಿದ ಆಕ್ಷೇಪಣೆಗೆ ಅನುಗುಣವಾಗಿ ದಿನಾಂಕ 22.01.2021ರಂದು ನಿರ್ಧಾರಣಾ ಸಭೆಯನ್ನು ಕರೆಯಲಾಗಿತ್ತೆಂದೂ ಆ ದಿನ ಗ್ರಾಹಕರೊಂದಿಗೆ ಚರ್ಚಿಸಿ ದಿನಾಂಕ 21.10.2020ರ ವರದಿಯ ಪ್ರಕಾರ ಪ್ರಕರಣಕ್ಕೆ ಸಂಬಂಧಿಸಿದಂತೆ ರೂ. 4,22,228/-ಗಳ ಹಿಂಬಾಕಿಯನ್ನು ಮಾಡಿರುವುದು ಸೂಕ್ತವಾಗಿದೆ ಎಂಬುದಾಗಿ ನಿರ್ಧರಿಸಲಾಯಿತೆಂದು ಗ್ರಾಹಕರಿಗೆ ವಿಧಿಸಿರುವ ರೂ. 4,22,228/- ಹಿಂಬಾಕಿಯು ಯಾವುದೇ ದಂಡದ ಮೊತ್ತವಾಗಿರದೇ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮಾಪಕ ತಪಾಸಣಾ, ಹೆಚ್‌ಟಿ ರೇಟಿಂಗ್ ಉಪವಿಭಾಗ-1 ಹೆಸ್ಕಾಂ ಹುಬ್ಬಳ್ಳಿ ಇವರು ದಿನಾಂಕ 21.10.2020ರಂದು ಸ್ಥಾವರವನ್ನು ಪರಿಶೀಲಿಸಿದಾಗ “R” (A1)ನ Current Transformer (CT) Test Termina Block (TTB)ಗೆ ಬಂದಂತಹ ಕೇಬಲ್ ಕಳಚಿರುವುದರಿಂದ ಮಾಪಕದಲ್ಲಿ 50%ರಷ್ಟು ವಿದ್ಯುತ್ ಕಡಿಮೆ ಬಳಕೆ ದಾಖಲಾಗಿರುವ ಬಗ್ಗೆ ನೀಡಿರುವ ಡೌನ್‌ಲೋಡೆಡ್ ಡಾಟಾ (Downloaded Data) ಆಧರಿಸಿ ವ್ಯತ್ಯಾಸದ ಬಿಲ್ಲನ್ನು Conditions of Supply of Electricity of Distributions Licensees in the State of Karnataka ನಿಯಮಾವಳಿ ಕಂಡಿಕೆ 29.03 ಪ್ರಕಾರ ನೀಡಲಾಗಿರುತ್ತದೆಂದು, ಈ ಪ್ರಕರಣದಲ್ಲಿ Conditions of Supply of Electricity of Distributions Licensees in the State of Karnataka ಕಂಡಿಕೆ 27.00 ಅನ್ವಯಿಸುವುದಿಲ್ಲವೆಂದು ನುಡಿದಿರುತ್ತಾರೆ.

9) ಮತ್ತೆ ಮುಂದುವರೆದು ಈ ಪ್ರಕರಣದ ಮಾಪಕವು ಸರಿ ಇರುತ್ತದೆಂದು ಆದರೆ ಸಿಟಿ ಇಂದ ಬಂದ ಕೇಬಲ್ ಕಳಚಿರುವುದರಿಂದ 100%ರಷ್ಟು ಬಳಕೆ ದಾಖಲಾಗಿರುವುದಿಲ್ಲವೆಂದು ಮತ್ತು ಗ್ರಾಹಕರ ಪ್ರತಿನಿಧಿಯವರ

ಸಮಕ್ಷಮವೇ ದಿನಾಂಕ 21.10.2020ರಂದೇ ಕೇಬಲ್‌ನ್ನು ಮಾಪಕದ ಟಿಟಿಬಿಗೆ ಜೋಡಣೆ ಮಾಡಿರುವುದರಿಂದ Conditions of Supply of Electricity of Distributions Licensees in the State of Karnataka ಕಂಡಿಕೆ 27.04 (vii) ರಂತೆ 5% ರಿಯಾಯಿತಿ ಅನ್ವಯವಾಗುವುದಿಲ್ಲವೆಂದು, ಮಾಪಕವು ಸರಿ ಇದ್ದ ಕಾರಣ 3ನೇ ವ್ಯಕ್ತಿಯ ತಪಾಸಣೆಗೆ ಸದರಿ ಮಾಪಕವನ್ನು ಒಳಪಡಿಸುವ ಅಗತ್ಯ ಇರುವುದಿಲ್ಲವೆಂದು, ಈ ಎಲ್ಲಾ ಕಾರಣಗಳಿಂದ ಎರಡನೇ ಪ್ರತಿವಾದಿಯು ಮಾಡಿರುವ ಆದೇಶವು ನ್ಯಾಯೋಚಿತವಾಗಿದ್ದು ಸದರಿ ಆದೇಶವನ್ನು ಎತ್ತಿ ಹಿಡಿಯುತ್ತಾ ಪ್ರಸ್ತುತ ಅಪೀಲನ್ನು ವಜಾಮಾಡಲು ಕೋರಿಕೊಂಡಿರುತ್ತಾರೆ.

10) ಉಭಯಪಕ್ಷಕಾರರು ಸಲ್ಲಿಸಿದ ಮೇಲ್ಮನವಿ ಹಾಗೂ ಅಂಶಗಳನ್ನು ಪರಿಗಣಿಸಿ ಈ ಪ್ರಕರಣವನ್ನು ವಾದವಿವಾದಕ್ಕೆ ಮುಂದೂಡಲಾಗಿತ್ತು. ಅದರಂತೆ ಅಪೀಲುದಾರರ ಪರ ಅಧಿಕೃತ ಪ್ರತಿನಿಧಿಯವರು ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ವಾದವನ್ನು ಮಂಡಿಸಿರುತ್ತಾರೆ. ಅದೇ ರೀತಿ ಒಂದನೇ ಪ್ರತಿವಾದಿ ಸಹ ಖುದ್ದು ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಪರ ವಾದವನ್ನು ಮಂಡಿಸಿರುತ್ತಾರೆ ಹಾಗೂ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

11) ಉಭಯಪರ ವಾದವಿವಾದಗಳನ್ನು ಕೇಳಿರುತ್ತೇನೆ ಹಾಗೂ ಕಡತದ ಪರಿಶೀಲನೆಯನ್ನು ಮಾಡಿರುತ್ತೇನೆ.

12) ಈ ಹಂತದಲ್ಲಿ ಮೇಲ್ಮನವಿಯ ಇತ್ಯರ್ಥಕ್ಕಾಗಿ ಈ ಕೆಳಕಂಡ ಅಂಶಗಳು ಮೂಡಿಬರುತ್ತವೆ: -

i. ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ, ಹುಬ್ಬಳ್ಳಿ ರವರು ದಿನಾಂಕ 07.04.2021, ಪ್ರಕರಣ ಸಂಖ್ಯೆ: CGRF 253/2021, ಆದೇಶ ಸಂಖ್ಯೆ: ಅಇಂ(ವಿ)/ಉಲೆನಿ/ಹಿಸ-

1/ಗ್ರಾಕುಂಕೊನಿವೇ/ಕಡತ-253/2021/CYS-11 ಪ್ರಕರಣದಲ್ಲಿ ಹೊರಡಿಸಿರುವ ಆದೇಶವು ನಿರಂಕುಶ ಹಾಗೂ ಕಾನೂನು ಬಾಹಿರವಾಗಿರುತ್ತದೆಂದು ಮೇಲ್ಮನವಿದಾರರು ಸಾಬೀತುಪಡಿಸಿರುತ್ತಾರೆಯೇ?

ii. ಏನು ಆದೇಶ?

13) ಈ ಕೆಳಕಂಡ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಈ ರೀತಿ ಉತ್ತರಿಸಿದ್ದೇನೆ.

i. **ಅಂಶ (i)** – ನಕಾರಾತ್ಮಕವಾಗಿ

ii. **ಅಂಶ (ii)** – ಕಡೆಯ ಆದೇಶದಂತೆ

## <u>ಕಾರಣಗಳು</u>

14) **<u>ಅಂಶ (i):</u>** ವಾದವಿವಾದದ ಸಮಯದಲ್ಲಿ ಅಪೀಲುದಾರ ಪರ ಹಾಜರಾಗಿದ್ದ ಪ್ರತಿನಿಧಿರವರು ತಮ್ಮ ವಾದವನ್ನು ಮಂಡಿಸುತ್ತಾ ಆರ್.ಆರ್. ನಂ. HT-294ರಲ್ಲಿರುವ ಮಾಪಕವು ಅಪೀಲುದಾರರಾದ ಶ್ರೀ ಅಶೋಕ್ ಆರ್ ನೀಲಿ ರವರ ಹೆಸರಲ್ಲಿ ನೋಂದಣಿ ಆಗಿರುತ್ತದೆಂದು ಇವರ ಸ್ಥಾವರ ಸಂಖ್ಯೆಗೆ 100 KVA ವಿದ್ಯುತ್ ಮಂಜೂರಾತಿಯಾಗಿದ್ದು HT-2(b) ಜಕಾತಿಯಲ್ಲಿ ಸಂಪರ್ಕಿತಗೊಂಡಿರುತ್ತದೆಂದು ಹಾಗೂ ಇದೊಂದು ವಾಣಿಜ್ಯ ಸ್ಥಾವರ ಆಗಿರುತ್ತದೆಂದು ನುಡಿದಿರುತ್ತಾರೆ. ಮತ್ತೆ ಮುಂದುವರೆದು ಅಪೀಲುದಾರರಿಗೆ ಸ್ಥಾವರವು ಮಂಜೂರಾದ ದಿನದಿಂದ ಇಲ್ಲಿಯವರೆಗೂ ಕ್ರಮಬದ್ಧವಾಗಿ ವಿದ್ಯುತ್ ಬಿಲ್ಲುಗಳು ಬರುತ್ತಿದ್ದು, ಸದರಿ ಬಿಲ್ಲುಗಳ ಮೊತ್ತವನ್ನು ಅಪೀಲುದಾರರು ನಿಯಮಿತ ರೂಪದಲ್ಲಿ ಪಾವತಿ ಮಾಡುತ್ತಿರುತ್ತಾರೆಂದು, ಈ ರೀತಿ ಇರುವಾಗ ಸದರಿ ಸ್ಥಾವರದ ಮಾಪಕವು 50% ನಿಧಾನಗತಿಯಲ್ಲಿ ತಿರುಗುತ್ತಿದೆಯೆಂದು ಆರೋಪಿಸಿ ದಿನಾಂಕ 21.02.2020ರಿಂದ

21.10.2020ರವರೆಗೆ ಹಿಂಬಾಕಿ ಇರುತ್ತದೆಂದು ಹೇಳಿ ಒಟ್ಟು ರೂ. 5,96,010/-ಗಳನ್ನು ಪಾವತಿ ಮಾಡುವಂತೆ ಹಿಂಬಾಕಿ ಬಿಲ್ಲನ್ನು ನೀಡಿರುತ್ತಾರೆಂದು, ಈ ಡಿಮಾಂಡ್ ನೋಟಿಸು (Demand Notice) 20.11.2020ರಂದು ಅಪೀಲುದಾರರಿಗೆ ತಲುಪಿರುತ್ತದೆಂದು, ಆದರೆ ಒಂದನೇ ಪ್ರತಿವಾದಿಯು ಆರೋಪ ಮಾಡಿದಂತೆ 50% ರಷ್ಟು ನಿಧಾನಗತಿಯಲ್ಲಿ ಮಾಪಕವು ತಿರುಗುತ್ತಿತ್ತು ಎಂದು ತೋರಿಸುವ ಯಾವುದೇ ದಾಖಲೆ ಅಥವಾ ಸಾಕ್ಷ್ಯವನ್ನು ಹಾಜರು ಪಡಿಸಿಲ್ಲವೆಂದು ಮಹಜರ್ ಕೂಡ ಮಾಡಿಲ್ಲವೆಂದು ಅಷ್ಟೇ ಅಲ್ಲದೇ ಮಾಪಕದಲ್ಲಿ ದೋಷ ಇದ್ದಿದ್ದೇ ಆದಲ್ಲಿ ಅದನ್ನು 3rd Party Agency ರವರಿಗೆ ಪರಿಶೀಲನೆಗಾಗಿ ಕಳಿಸಿಕೊಡಬೇಕಾಗಿತ್ತೇಂದೂ ಆದರೆ ಆ ರೀತಿ ಕಳಿಸಿಕೊಟ್ಟಿಲ್ಲವೆಂದು, ಈ ರೀತಿಯಾಗಿ ಒಂದನೇ ಎದುರುದಾರರು Conditions of Supply of Electricity of Distribution Licensees in the State of Karnataka, Clause 42.06 (e) ಹಾಗೂ Clause 27.01 ಇವುಗಳಲ್ಲಿ ಅಡಕವಾದ ಪ್ರಕ್ರಿಯೆಯನ್ನು ಅನುಸರಿಸಿಲ್ಲವೆಂದು ಆದ ಕಾರಣ ಅಪೀಲುದಾರರು ಯಾವುದೇ ಹಿಂಬಾಕಿ ಮೊತ್ತ ನೀಡುವ ಅಗತ್ಯವಿಲ್ಲವೆಂದು ನುಡಿದಿರುತ್ತಾರೆ.

15) ಮತ್ತೆ ಮುಂದುವರೆದು ಒಂದನೇ ಎದುರುದಾರರು ಮತ್ತೊಂದು ಪರಿಷ್ಕೃತ ಬಿಲ್ಲನ್ನು ರೂ. 4,22,228/-ಗಳಿಗೆ ನೀಡಿರುತ್ತಾರೆಂದು ಮತ್ತು ಈ ಅಂತಿಮ ಬಿಲ್ಲಿನ ಮೊತ್ತವನ್ನು ಪಾವತಿ ಮಾಡುವಂತೆ Demand Noticeನ್ನು ಕಳಿಸಿರುತ್ತಾರೆಂದು. ಇದರಿಂದ ನೊಂದ ಅಪೀಲುದಾರರು ಎರಡನೇ ಎದುರುದಾರರ ಮುಂದೆ ದೂರು ಸಂಖ್ಯೆ 253/2021ಯಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆಂದು, ಆದರೇ ಎರಡನೇ ಎದುರುದಾರರು ಸಹ ಕಾನೂನು ರೀತ್ಯಾ ಆದೇಶ ಮಾಡಿಲ್ಲವೆಂದು ಅಷ್ಟೇ ಅಲ್ಲದೆ Conditions of Supply of Electricity of Distribution Licensees in the State of Karnataka, Clause 27.04

(vii)ರಂತೆ 5% ರಷ್ಟು ರಿಯಾಯಿತಿ ಕೂಡ ನೀಡಿಲ್ಲವೆಂದು ಮತ್ತು ವಿದ್ಯುತ್ ಕಾಯ್ದೆ 1910, ಕಲಂ 26 (6) ರೀತ್ಯಾ ಆದೇಶವನ್ನು ಮಾಡಿಲ್ಲವೆಂದು ಆದ್ದರಿಂದ ಎರಡನೇ ಎದುರುದಾರರು ಮಾಡಿರುವಂತಹ ಪ್ರಶ್ನಿತ ಆದೇಶವನ್ನು ತೆರವುಗೊಳಿಸಿ ಸೂಕ್ತ ಆದೇಶ ಹೊರಡಿಸಬೇಕೆಂದು ಕೋರಿಕೊಂಡಿರುತ್ತಾರೆ.

16) ಇವರು ತಮ್ಮ ವಾದಕ್ಕೆ ಬೆಂಬಲಿತವಾಗಿ ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಹುಬ್ಬಳ್ಳಿರವರು ಹೊರಡಿಸಿದ ಪ್ರಕರಣ ಸಂಖ್ಯೆ 253/2021ರ ದಿನಾಂಕ 07.04.2021ರ ಆದೇಶದ ನಕಲನ್ನು ಹಾಗೂ ದಿನಾಂಕ 21.10.2021ರ ಹೆಚ್.ಟಿ ರೇಟಿಂಗ್ ರಿಪೋರ್ಟ್‌ನ (HT Rating Report) ನಕಲನ್ನು ಹಾಜರುಪಡಿಸಿರುತ್ತಾರೆ.

17) ಒಂದನೇ ಎದುರುದಾರರು ವಾದವಿವಾದದ ಕಾಲದಲ್ಲಿ ತಮ್ಮ ವಾದವನ್ನು ಮಂಡಿಸುತ್ತಾ ವಿದ್ಯುತ್ ಸ್ಥಾವರ ಸಂಖ್ಯೆ HT-294ನ ನೋಂದಾಯಿತ ವಿದ್ಯುತ್ ಗ್ರಾಹಕರು ಶ್ರೀ ಅಶೋಕ್ ರಾಜಶೇಕರಪ್ಪ ನೀಲಿ ಎನ್ನುವವರಾಗಿದ್ದು ಈ ಸ್ಥಾವರವು HT-2(b) ಜಕಾತಿಯಲ್ಲಿ 100KVA ಭಾರಕ್ಕೆ ಮಂಜೂರಾತಿ ಹೊಂದಿರುತ್ತದೆ ಎಂದು, ದಿನಾಂಕ 21.10.2020ರಂದು ಈ ಸ್ಥಾವರದ ಮಾಪಕವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮಾಪಕ ತಪಾಸಣಾ, HT Rating ಉಪವಿಭಾಗ, ಹೆಸ್ಕಾಂ, ಹುಬ್ಬಳ್ಳಿ ಇವರು ಪರಿಶೀಲನೆ ಮಾಡಿದ್ದರೆಂದು ಆ ಸಮಯದಲ್ಲಿ ಪಡೆದ downloaded data ಪ್ರಕಾರ ಸದರಿ ಮಾಪಕವು 50% ರಷ್ಟು ನಿಧಾನಗತಿಯಲ್ಲಿ ತಿರುಗುತ್ತಿದ್ದು ಆ ಕಾರಣದಿಂದ ದಿನಾಂಕ 21.02.2020ರಿಂದ 21.10.2020ರವರೆಗೆ ಹಿಂಬಾಕಿ ಮೊತ್ತ 5,96,010/- ರೂಪಾಯಿಗಳನ್ನು ಆಕರಿಸಿ ಗ್ರಾಹಕರಿಗೆ ತುಂಬುವಂತೆ ದಿನಾಂಕ 10.11.2020ರಂದು ನೋಟಿಸ್ ಮೂಲಕ ತಿಳಿಸಲಾಗಿತ್ತೆಂದು, ಆದರೆ ಈ ನೋಟಿಸಿಗೆ ಯಾವುದೇ ಆಕ್ಷೇಪಣೆಯನ್ನು ಗ್ರಾಹಕರು ಸಲ್ಲಿಸಿಲ್ಲವೆಂದು

ನುಡಿದಿರುತ್ತಾರೆ. ಈ ರೀತಿ ಆಕ್ಷೇಪಣೆ ಸಲ್ಲಿಸದೇ ಇರುವುದರಿಂದ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮಾಪಕ ತಪಾಸಣಾ, HT Rating ಉಪವಿಭಾಗ, ಹೆಸ್ಕಾಂ, ಹುಬ್ಬಳ್ಳಿರವರು ಹಿಂದೆ ಆಕರಿಸಿದ್ದ ಹಿಂಬಾಕಿ ಮೊತ್ತ ದಿನಾಂಕ 01.02.2020ರಿಂದ 31.10.2020ರವರೆಗೆ ಆಕರಿಸಿರುವುದು ಸೂಕ್ತವಲ್ಲವೆಂದು ಮನಗಂಡು ಹಿಂಬಾಕಿ ಮೊತ್ತವನ್ನು ಪುನಃ ಪರಿಷ್ಕರಿಸಿ ರೂ. 4,22,228/-ಗಳಿಗೆ ಅಂತಿಮ ಆದೇಶವನ್ನು ಹೊರಡಿಸಿ ದಿನಾಂಕ 05.12.2020ರಂದು ಈ ಮೊತ್ತವನ್ನು ಪಾವತಿಮಾಡುವಂತೆ ಗ್ರಾಹಕರಿಗೆ ತಿಳಿಸಿರುತ್ತಾರೆಂದು ನುಡಿದಿರುತ್ತಾರೆ.

18) ಮತ್ತೆ ಮುಂದುವರೆದು Conditions of Supply of Electricity of Distribution Licensees in the State of Karnataka ಕಂಡಿಕೆ 42.06(e) ಪ್ರಕಾರ ವಿದ್ಯುತ್ ಕಳ್ಳತನ ಆಗಿದ್ದಂತಹ ಸಂದರ್ಭದಲ್ಲಿ ಮಹಜರ್ ಮಾಡಬೇಕಾಗಿರುತ್ತದೆಂದು ಆದರೆ ಪ್ರಸ್ತುತ ಪ್ರಕರಣವು ವಿದ್ಯುತ್ ಕಳ್ಳತನದ ಪ್ರಕರಣ ಆಗಿರುವುದಿಲ್ಲವೆಂದು, ಮಾಪಕದ ನಿಧಾನಗತಿಯ ದಾಖಲೆಗೆ ಸಂಬಂಧಪಟ್ಟಿದ್ದು ಆಗಿರುತ್ತದೆಂದು ಆದ್ದರಿಂದ ಮೇಲ್ಕಂಡ ಕಂಡಿಕೆ 42.06(e) ಅನ್ವಯ ಆಗುವುದಿಲ್ಲವೆಂದು ನುಡಿದಿರುತ್ತಾರೆ.

19) ಮತ್ತೆ ಮುಂದುವರೆದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮಾಪಕ ತಪಾಸಣಾ, HT Rating ಉಪವಿಭಾಗ-1ರವರು, ಸ್ಥಾವರವನ್ನು ಶಾಖಾಧಿಕಾರಿಗಳು ಹಾಗೂ ಬಳಕೆದಾರರ ಸಮ್ಮುಖದಲ್ಲಿ ಪರಿಶೀಲಿಸಿ Conditions of Supply of Electricity of Distribution Licensees in the State of Karnataka, ಕಂಡಿಕೆ 27.03(iii) ವರದಿಯ ಮೇಲೆ ಸದರಿಯವರ ಸಹಿಗಳನ್ನು ಪಡೆದು ಇದರ ಒಂದು ಪ್ರತಿಯನ್ನು ಬಳಕೆದಾರರಿಗೆ ಸಹ ನೀಡಿರುತ್ತಾರೆಂದು ನುಡಿದಿರುತ್ತಾರೆ.

20) ಮತ್ತೆ ಮುಂದುವರೆದು Conditions of Supply of Electricity of Distribution Licensees in the State of Karnataka, ಕಂಡಿಕೆ 27.03(4) ಪ್ರಕಾರ ಗ್ರಾಹಕರು ಅಥವಾ ಗ್ರಾಹಕರ ಪ್ರತಿನಿಧಿಯವರು ಸ್ಥಾವರದ ಮಾಪಕ ತಪಾಸಣಾ ವರದಿಯ ಮೇಲೆ ಸಹಿ ಹಾಕಲು ನಿರಾಕರಿಸಿದಾಗ ಮಾತ್ರ ಮಾಪಕದ ದೋಷವನ್ನು ಸರಿಪಡಿಸುವುದಾಗಲೀ ಅಥವಾ ಮಾಪಕವನ್ನು ಬದಲಾವಣೆ ಮಾಡುವುದಾಗಲೀ ಮಾಡದೇ 3rd Party Agencyರವರಿಗೆ ಮಾಪಕವನ್ನು ಸ್ಥಳದಲ್ಲಿ ಪರಿಶೀಲಿಸಲು ಕೋರಬೇಕಾಗಿರುತ್ತದೆಂದು ಆದರೆ ಪ್ರಸ್ತುತ ಪ್ರಕರಣದಲ್ಲಿ ಸ್ಥಾವರದ ಮಾಪವನ್ನು ಬಳಕೆದಾರರ ಸಮ್ಮುಖದಲ್ಲೇ ಪರಿಶೀಲಿಸಿ ಮಾಪಕ ತಪಾಸಣಾ ವರದಿಯ ಮೇಲೆ ಬಳಕೆದಾರರ ಸಹಿಯನ್ನು ಪಡೆದುಕೊಂದು ಅದರ ಒಂದು ಪ್ರತಿಯನ್ನು ಕೂಡ ಬಳಕೆದಾರರಿಗೆ ನೀಡಿರುವ ಕಾರಣ, 3rd Party Agencyರವರಿಗೆ ಮಾಪಕ ತಪಾಸಣೆಗಾಗಿ ಕೋರುವ ಅಗತ್ಯ ಇರುವುದಿಲ್ಲವೆಂದು ನುಡಿದಿರುತ್ತಾರೆ.

21) ಮತ್ತೆ ಮುಂದುವರೆದು ಸ್ಥಾವರದ ಮಾಪಕವನ್ನು 21.10.2020ರಂದು ಪರಿಶೀಲಿಸಿದ್ದು ಅದೇ ದಿನ ಮಾಪಕವು ದೋಷಪೂರಿತವಾಗಿ 50%ರಷ್ಟು ನಿಧಾನಗತಿಯಲ್ಲಿ ಚಲಿಸಿರುತ್ತಿರುವುದಾಗಿ ವರದಿ ಸಲ್ಲಿಸಿದ ಕಾರಣ ಅದೇ ದಿನ ದೋಷಪೂರಿತ ಮಾಪಕವನ್ನು ಸರಿಪಡಿಸಲಾಗಿರುತ್ತದೆಂದು ನುಡಿದಿರುತ್ತಾರೆ. Conditions of Supply of Electricity of Distribution Licensees in the State of Karnataka, ಕಂಡಿಕೆ 27.04(7) ಪ್ರಕಾರ ಬಳಕೆ ದಾಖಲಾಗದಿದ್ದಲ್ಲಿ ಮಾಪಕ ತಪಾಸಣಾ ವರದಿಯ ದಿನಾಂಕದಿಂದ 15 ದಿನಗಳೊಳಗಾಗಿ ಸದರಿ ಮಾಪಕವನ್ನು ಉತ್ತಮ ಮಾಪಕದೊಂದಿಗೆ ಬದಲಾಯಿಸಬೇಕಾಗಿರುತ್ತದೆಂದು ಇಲ್ಲದೇ ಹೋದಲ್ಲಿ ಮಾತ್ರ ಮಾಸಿಕ ಬಿಲ್ಲಿನಲ್ಲಿ 5%ರಷ್ಟು ರಿಯಾಯಿತಿಯನ್ನು ನೀಡಬೇಕಾಗುತ್ತದೆಂದು, ಆದರೆ

ಪ್ರಸ್ತುತ ಪ್ರಕರಣದಲ್ಲಿ ನಿಧಾನಗತಿಯಲ್ಲಿ ತಿರುಗುತ್ತಿರುವ ಮಾಪಕವನ್ನು ಅದೇ ದಿನ ಸರಿಪಡಿಸಲಾಗಿದೆಯೆಂದು ಆದ ಕಾರಣ 5%ರಷ್ಟು ರಿಯಾಯಿತಿ ನೀಡಬೇಕು ಎನ್ನುವುದು ಅನ್ವಯಿಸುವುದಿಲ್ಲವೆಂದು ನುಡಿದಿರುತ್ತಾರೆ. ಅಂತಿಮ ಬಿಲ್ಲಿನಲ್ಲಿ ನೀಡಲಾದ ಮೊತ್ತ 4,22,228/-ರೂ.ಗಳು ಗ್ರಾಹಕರು ಈಗಾಗಲೇ ಬಳಸಿಕೊಳ್ಳಲಾಗಿದ್ದ ವ್ಯತ್ಯಾಸದ ಮೊತ್ತ ಆಗಿರುತ್ತದೆಯೇ ಹೊರತು ಯಾವುದೇ ದಂಡದ ಮೊತ್ತ ಅಲ್ಲವೆಂದು, ಆದ್ದರಿಂದ ಎರಡನೇ ಎದುರುದಾರರು ಹೊರಡಿಸಿರುವ ಪ್ರಶ್ನಿತ ಆದೇಶವು ಸೂಕ್ತವಾಗಿದೆಯೆಂದು. ಆದ್ದರಿಂದ ಪ್ರಸ್ತುತ ಅಪೀಲು ಊರ್ಜಿತ ಆಗುವುದಿಲ್ಲವೆಂದು ಆದ ಕಾರಣ ಅಪೀಲನ್ನು ವಜಾ ಮಾಡುವಂತೆ ಕೋರಿಕೊಂಡಿರುತ್ತಾರೆ.

22) ಒಂದನೇ ಎದುರುವದಾರರು ತಮ್ಮ ವಾದಕ್ಕೆ ಪೂರಕವಾಗಿ Pre-Commission Test Reportನ ನಕಲನ್ನು, Periodical Testing Reportsನ ನಕಲುಗಳನ್ನು, ದಿನಾಂಕ 21.10.2020ರ ಒಂದು ಮಹಜರ್ ವರದಿಯ ನಕಲನ್ನು, ದಿನಾಂಕ 05.12.2020ರ ಅಂತಿಮ ಕಂದಾಯ ನಿರ್ಧರಣಾ ಆದೇಶದ ನಕಲನ್ನು ಹಾಗೂ ಪ್ರಶ್ನಿತ ಆದೇಶದ ನಕಲನ್ನು ಸಲ್ಲಿಸಿರುತ್ತಾರೆ.

23) ಉಭಯಪಕ್ಷಕಾರರು ಮಂಡಿಸಿದ ವಾದವಿವಾದಗಳನ್ನು ಕೇಳಿ, ಸದರಿಯವರು ಸಲ್ಲಿಸಿದ ದಾಖಲಾತಿಗಳ ಪರಿಶೀಲನೆಯನ್ನು ಮತ್ತೊಮ್ಮೆ ಕೂಲಂಕುಶವಾಗಿ ಮಾಡಿರುತ್ತೇನೆ.

24) ವಿದ್ಯುತ್ ಸ್ಥಾವರ ಸಂಖ್ಯೆ HT294, ಇದು ಅಪೀಲುದಾರರಿಗೆ ಮಂಜೂರಾಗಿದ್ದು 100KVA ವಿದ್ಯುತ್ ಮಂಜೂರಾತಿಯೊಂದಿಗೆ HT 2(b) ಜಕಾತಿಯಲ್ಲಿ ಸಂಪರ್ಕಿತಗೊಂಡಿರುವುದು ಹಾಗೂ ಅಪೀಲುದಾರರು ಕಾಲಕಾಲಕ್ಕೆ ತಕ್ಕಂತೆ ನೀಡುತ್ತಿರುವ ವಿದ್ಯುತ್ ಬಿಲ್ಲುಗಳ ಮೊತ್ತವನ್ನು ಪಾವತಿ ಮಾಡಿರುವುದು. ಅದೇ ರೀತಿ ದಿನಾಂಕ 21.10.2020ರಂದು ಸದರಿ ಮಾಪಕವನ್ನು ಸಹಾಯಕ

ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮಾಪಕ ತಪಾಸಣಾ, HT Rating ಉಪವಿಭಾಗ, ಹೆಸ್ಕಾಂ, ಹುಬ್ಬಳ್ಳಿರವರು ತಪಾಸಣೆ ಮಾಡಿರುತ್ತಾರೆ ಎಂಬುದರಲ್ಲಿ ಯಾವುದೇ ವಿವಾದ ಇರುವುದಿಲ್ಲ.

25) ಒಂದನೇ ಎದುರುದಾರರು ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲನೆ ಮಾಡಿದಾಗ ದಿನಾಂಕ 09.10.2013ರಂದು RR No. HT294 ಸ್ಥಾವರಕ್ಕೆ ಸಂಬಂಧಪಟ್ಟಂತೆ Pre-Commissioning Test ಅನ್ನು ಮಾಡಿರುವುದು ಹಾಗೂ ಅದಕ್ಕನುಗುಣವಾಗಿ ವರದಿ ನೀಡಿರುವುದು ಕಂಡುಬರುತ್ತದೆ. ಸದರಿ ವರದಿಯಲ್ಲಿ

> *"1. ETV Meter Accuracy Test conducted in the present of EEE O & M, AEEE O & M, SO O & M, Section IE representative of the Consumer and found OK.*
> *2. Installation visited to conduct PCT. All test results found satisfactorily.*
> *3. Before HT cubicle 1+2 LBs units provided, i.e., service main not through. Before charging the cubicle approval from competent Authority may be taken as per Company Norms."*

ಎಂಬುದಾಗಿರುವುದು ಕಂಡುಬರುತ್ತದೆ. ಇದರ ಪ್ರಕಾರ HT-294 ಸ್ಥಾವರವು PCT ಸಮಯದಲ್ಲಿ ಸಮರ್ಪಕವಾಗಿರುತ್ತದೆ.

26) ಅದೇ ರೀತಿ ಒಂದನೇ ಎದುರುದಾರರು ಹಾಜರುಪಡಿಸಿದ HT-294ಗೆ ಸಂಬಂಧಿಸಿದ ದಿನಾಂಕ 23.10.2013, 27.10.2014, 14.10.2015, 06.03.2017, 16.03.2018, 16.11.2018 ಹಾಗೂ 23.12.2019ಗಳಲ್ಲಿನ ನಿಯತಕಾಲಿಕ ಪರೀಕ್ಷಾ (Periodical Test) ವರದಿಗಳ ನಕಲುಗಳನ್ನು ಪರಿಶೀಲಿಸಿದಾಗ ಅಂದಿನ ತಪಾಸಣಾಧಿಕಾರಿಗಳು ಅರ್ಜಿದಾರರ ಸ್ಥಾವರದ ಮಾಪಕವನ್ನು ಹಾಗೂ ಮಾಪವನ್ನು ತಪಾಸಣೆಗೆ ಒಳಪಡಿಸಿ "found OK" ಎಂಬುದಾಗಿ ಅಭಿಪ್ರಾಯ ಪಟ್ಟಿರುವುದು ಕಂಡು ಬರುತ್ತದೆ.

27) ದಿನಾಂಕ 21.10.2020ರಂದು ಅರ್ಜಿದಾರರ ಸ್ಥಾವರದ ಮಾಪಕವನ್ನು ಹಾಗೂ ಮಾಪವನ್ನು ತಪಾಸಣೆಗೆ ಒಳಪಡಿಸಿದ್ದು, ಆ ಸಮಯದಲ್ಲಿ "it is observed that 'R' Phase (A1) current is showing zero in the meter for 'B' Phase (A3) is 0.998 A, it is observed that 'R' phase (A1) CT to TTS cable found open. Hence informed the Section Officer to avail line clear, then cable reconnected & CT's ratio test conducted, CT is found OK. ETV meter data downloaded in the laptop for further and as per report BBC to be raised, informed the consumer and agreed to pay the BBC." ಎಂಬುದಾಗಿ ಪರಿಶೀಲನಾ ವರದಿ ನೀಡಿರುವುದು ಕಂಡು ಬರುತ್ತದೆ. ಈ ದಾಖಲೆಯಲ್ಲಿ ಗ್ರಾಹಕ ಪ್ರತಿನಿಧಿಯು ಸೇರಿದಂತೆ ಒಂದನೇ ಎದುರುದಾರ ಕಂಪನಿಯ ತಪಾಸಣಾಧಿಕಾರಿಗಳು ಸಹ ಸಹಿಗಳನ್ನು ಹಾಕಿರುವುದು ಕಂಡುಬರುತ್ತದೆ. ಈ ದಾಖಲೆಯನ್ನು ಅಪೀಲುದಾರರು ಅಲ್ಲಗೆಳೆದಿರುವುದಿಲ್ಲ.

28) ದಿನಾಂಕ 21.10.2020ರ ಮಹಜರ್ ನಕಲನ್ನು ಪರಿಶೀಲಿಸಿದಾಗ ಒಂದನೇ ಎದುರುದಾರ ಕಂಪನಿಯ ತಪಾಸಣಾಧಿಕಾರಿಗಳಾದ AEE (Ele), HT MR Subdivision-1, HESCOM, AE (Section Officer), IE Section, HESCOM, CSD-3, Hubli, AE HTMR SD-1, HESCOM, Section Officer, IE Section, HESCOM, Hubli ಹಾಗೂ ಗ್ರಾಹಕ ಪ್ರತಿನಿಧಿರವರು ಹಾಜರಿದ್ದು ಮಹಜರ್ ಕ್ರಮವನ್ನು ಬೆಳಿಗ್ಗೆ 11.30 ಗಂಟೆಗೆ ಅಪೀಲುದಾರರ HT-294 ಸ್ಥಾವರದಲ್ಲಿ ಜರುಗಿಸಿದ್ದು ಕಂಡುಬರುತ್ತದೆ. ಆ ಸಮಯದಲ್ಲಿ "Due to open of 'R' Phase cable at TTB meter is not recording 100% consumption, it is recording only 50% consumption" ಎಂಬುದಾಗಿ ಪರಿಶೀಲನೆಯಲ್ಲಿ ಕಂಡು ಬಂದಿರುವುದು ಸ್ಪಷ್ಟವಾಗುತ್ತದೆ. ಮತ್ತು ಈ ದಾಖಲೆಗೆ ಅಲ್ಲಿ ಹಾಜರಿದ್ದ ಮೇಲೆ ಉಲ್ಲೇಖಿಸಲಾದ ಗ್ರಾಹಕ ಪ್ರತಿನಿಧಿಯೂ ಸೇರಿದಂತೆ ಒಂದನೇ

ಎದುರುದಾರರ ಕಂಪನಿಯ ಎಲ್ಲಾ ಅಧಿಕಾರಿಗಳು ಸಹಿ ಮಾಡಿರುವುದು ಕಂಡುಬರುತ್ತದೆ. ಈ ದಾಖಲೆಯನ್ನು ಸಹ ಅಪೀಲುದಾರರು ಅಲ್ಲಗೆಳೆದಿಲ್ಲ ಅಥವಾ ಇದರಲ್ಲಿ ಕಂಡುಬರುವಂತಹ ಗ್ರಾಹಕ ಪ್ರತಿನಿಧಿಯ ಸಹಿಯನ್ನು ಸಹ ಸುಳ್ಳೆಂದು ನುಡಿದಿಲ್ಲ.

29) ದಿನಾಂಕ 05.12.2020ರ ಅಂತಿಮ ಕಂದಾಯ ನಿರ್ಧರಣಾ ಆದೇಶವನ್ನು ಪರಿಶೀಲನೆ ಮಾಡಿದಾಗ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಕಾ ಮತ್ತು ಪಾ ಶಹರ ಉಪ ವಿಭಾಗ, ಹೆಸ್ಕಾಂ, ಹುಬ್ಬಳ್ಳಿ ರವರು ಅಪೀಲುದಾರರ ಮಾಪಕವು ನಿಧಾನಗತಿಯಲ್ಲಿ ಚಲಿಸುತ್ತಿರುವುದು ದಾಖಲಾಗಿರುವ ಬಗ್ಗೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), MRT ಹುಬ್ಬಳ್ಳಿರವರು ದಾಖಲಿಸಿದ MRT No. 3065-68 ದಿನಾಂಕ 21.10.2020ರ ಪ್ರಕಾರ ಮತ್ತು ಹೆಸ್ಕಾಂ ES & D ನಿಯಮಾವಳಿಗಳ ಪ್ರಕಾರ ಹಿಂದಾಕರಣೆ ಬಿಲ್ ರೂ. 4,22,228/-ಗಳು ಬಿಲ್ಲಿನ ಲೆಕ್ಕಾಚಾರ ಸರಿಯಾಗಿ ಇರುತ್ತದೆಂದು ಕಾರಣ ಸದರಿ ಹಿಂಬಾಕಿಯನ್ನು ಈ ಆದೇಶದ ದಿನಾಂಕದಿಂದ 15 ದಿನಗಳೊಳಗಾಗಿ ಪಾವತಿ ಮಾಡಲು ಸೂಚಿಸಿರುವುದು ಕಂಡು ಬರುತ್ತದೆ.

30) ಪ್ರಸ್ತುತ ಪ್ರಕರಣದಲ್ಲಿ ಅಪೀಲುದಾರರ ನಿಲುವೇನೆಂದರೇ ಪರಿಶೀಲನಾ ಸಮಯದಲ್ಲಿ ಮಾಪಕವು ದೋಷಪೂರಿತವಾಗಿದೆ ಎಂದು ಕಂಡು ಬಂದಿದ್ದೇ ಆದಲ್ಲಿ ಸದರಿ ಮಾಪಕವನ್ನು ಹಾಗೂ ಮಾಪವನ್ನು 3rd Party Inspection ಮೂಲಕ ಪರಿಶೀಲನೆ ಮಾಡಬೇಕಾಗಿತ್ತು ಎಂಬುದೇ ಆಗಿರುತ್ತದೆ. ಈ ರೀತಿ ಮಾಡದೆ ಇದ್ದ ಕಾರಣದಿಂದ ಒಂದನೇ ಎದುರುದಾರರು ಆರೋಪಿಸಿದಂತೆ 50% ರಷ್ಟು ನಿಧಾನಗತಿಯಲ್ಲಿ ಮಾಪಕವು ತಿರುಗುತ್ತಿದೆ ಎಂಬುದನ್ನು ನಂಬಲು ಸಾಧ್ಯವಿಲ್ಲ ಎಂದಾಗಿರುತ್ತದೆ.

31) Conditions of Supply of Electricity of Distribution Licensees in the State of Karnataka, ಕಂಡಿಕೆ 46.06 (e)ಯಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ: -

> *"In case of prejudicial use/Theft of Electricity under Clauses 42.01, 42.02, 42.05 and 42.06 above, the Assessing officer / Authorized officer shall draw mahazar at the time of inspection when such prejudicial use / Theft of Electricity is detected. The mahazar shall be drawn in the presence of the Consumer or his representative along with two other witnesses who shall sign the mahazar report. One copy of such report shall be handed over under acknowledgment of the Consumer or his representative."*

ಇದರ ಪ್ರಕಾರ ವಿದ್ಯುತ್ ಕಳ್ಳತನದಂತಹ ಪ್ರಕರಣಗಳಲ್ಲಿ ಮಾತ್ರ ಸಂಬಂಧಪಟ್ಟ ತಪಾಸಣಾಧಿಕಾರಿಗಳು ತಪಾಸಣಾ ಕಾಲದಲ್ಲಿ ಮಹಜರ್ ಕ್ರಮವನ್ನು ಅನುಸರಿಸಿ ಪಂಚನಾಮೆಯನ್ನು ಗ್ರಾಹಕ ಅಥವಾ ಆತನ ಪ್ರತಿನಿಧಿ ಹಾಗೂ ಇಬ್ಬರು ಸಾಕ್ಷಿದಾರರ ಸಮಕ್ಷಮ ಬರೆಯಬೇಕಾಗುತ್ತದೆ. ಮತ್ತು ಅವರ ಸಹಿಗಳನ್ನು ಪಡೆಯಬೇಕಾಗುತ್ತದೆ. ಆದರೆ ಪ್ರಸ್ತುತ ಪ್ರಕರಣವು ವಿದ್ಯುತ್ ಕಳುವಿನ ಪ್ರಕರಣ ಆಗಿರುವುದಿಲ್ಲ. ಆದ ಕಾರಣ ಮಹಜರ್ ಬರೆಯಬೇಕಾಗಿತ್ತು ಎಂದು ಅಪೀಲುದಾರರು ತೆಗೆದುಕೊಂಡಂತಹ ನಿಲುವನ್ನು ಒಪ್ಪಲಾಗುವುದಿಲ್ಲ.

32) Conditions of Supply of Electricity of Distribution Licensees in the State of Karnataka, ಕಂಡಿಕೆ 27.01ಯಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ: -

> *"In the event the Consumer disputed the accuracy of the meter, he shall give notice to the Licensee. The Licensee shall refer the matter for inspection/ testing of the meter to a "Third Party Agency' approved by the*

*Commission under information to the Consumer."*

ಇದರ ಪ್ರಕಾರ ಗ್ರಾಹಕನು ಮಾಪಕದ ನಿಖರತೆಯನ್ನು ಒಪ್ಪದೇ ಇದ್ದಂತಹ ಪರಿಸ್ಥಿತಿಯಲ್ಲಿ ಲೈಸೆನ್ಸ್‌ದಾರರಿಗೆ ನೋಟಿಸನ್ನು ನೀಡಬೇಕಾಗುತ್ತದೆ, ಆ ರೀತಿ ನೋಟಿಸು ನೀಡಿದ್ದಲ್ಲಿ ಲೈಸೆನ್ಸ್‌ದಾರರು ಈ ಪ್ರಕರಣವನ್ನು 3rd Party Agency ಮೂಲಕ ಮಾಪಕದ ಪರೀಕ್ಷೆ ನಡೆಸಬಹುದಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಅಪೀಲುದಾರರ ಮಾಪಕವು ಸುಸ್ಥಿತಿಯಲ್ಲೇ ಇದ್ದು Open of 'R' phase cable at TTB meter ಕಾರಣದಿಂದ 50%ರಷ್ಟು ನಿಧಾನಗತಿಯಲ್ಲಿ ಮಾಪವನ್ನು ತೋರಿಸಿರುತ್ತದೆ. ಅದೇ ಸಂದರ್ಭದಲ್ಲಿ ಜರುಗಿಸಿದ ಮಹಜರ್‌ಗೆ ಗ್ರಾಹಕ ಪ್ರತಿನಿಧಿಯು ಸಹ ತನ್ನ ಸಹಿಯನ್ನು ಹಾಕಿರುತ್ತಾರೆ ಮತ್ತು ಸದರಿ ಮಹಜರ್ ಕ್ರಮದ ಬಗ್ಗೆ ಗ್ರಾಹಕರು ಆಕ್ಷೇಪಣೆಯನ್ನು ಎಲ್ಲಿಯೂ ವ್ಯಕ್ತಪಡಿಸಿಲ್ಲ. ಆದ ಕಾರಣ 3rd Party Agency ಮೂಲಕ ಪರಿಶೀಲನೆ ಮಾಡುವಂತಹ ಅಗತ್ಯತೆ ಇರುವುದಿಲ್ಲ.

33) Conditions of Supply of Electricity of Distribution Licensees in the State of Karnataka, ಕಂಡಿಕೆ 27.04 (vii)ಯಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ: -

*"All meters not recording shall be replaced or repaired with in a maximum period of 15 days from the date of report by the Consumer / employees of the Licensee. In case the same is not done, the Licensee shall pay a rebate of 5% on the monthly energy bills issued as per the applicable clauses of the above table after the expiry of the above 15 days period till the meter is replaced."*

ಇದರ ಪ್ರಕಾರ ಗ್ರಾಹಕ ಅಥವಾ ಲೈಸೆನ್ಸುದಾರರ ಸಿಬ್ಬಂಧಿಯವರಿಂದ ಮಾಪಕಗಳು ಸರಿಯಾದ ರೀತಿಯಲ್ಲಿ ಮಾಪನ ಮಾಡುತ್ತಿಲ್ಲ ಎಂಬಂತೆ

ವರದಿ ಬಂದಂತಹ ಸಂದರ್ಭಗಳಲ್ಲಿ ಅಂತಹ ಮಾಪಕಗಳನ್ನು ವರದಿ ಬಂದ ದಿನದಿಂದ 15 ದಿನಗಳೊಳಗಾಗಿ ರಿಪೇರಿ ಮಾಡಬೇಕಾಗಿರುತ್ತದೆ ಅಥವಾ ಬದಲಾಯಿಸಬೇಕಾಗಿರುತ್ತದೆ. ಆ ರೀತಿ ಮಾಡದೇ ಹೋದಲ್ಲಿ ಲೈಸೆನ್ಸುದಾರರು ಸದರಿ 15 ದಿನಗಳಾದ ನಂತರ ಮಾಪಕಗಳನ್ನು ಬದಲಾವಣೆ ಮಾಡಿಕೊಡುವ ದಿನಾಂಕದವರೆಗೂ ಮಾಸಿಕ ವಿದ್ಯುತ್ ಬಿಲ್ಲುಗಳಲ್ಲಿ 5% ರಷ್ಟು ವಿನಾಯಿತಿ ನೀಡಬೇಕಾಗುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ಇಂತಹ ಪರಿಸ್ಥಿತಿ ಇರುವುದಿಲ್ಲ.

34) ಈ ಎಲ್ಲವನ್ನು ಪರಿಶೀಲಿಸಿದಾಗ ಕಂಡುಬರುದೇನೆಂದರೆ ಅಪೀಲುದಾರರು ಕೋರಿದಂತೆ ಅವರಿಗೆ ಸಂಬಂಧಿತ RR No. HT-294ರಲ್ಲಿನ ಮಾಪಕವನ್ನು 3rd Party ಪರಿಶೀಲನೆಗಾಗಿ ಒಳಪಡಿಸುವ ಅವಕಾಶ ಕಾನೂನು ಅಡಿಯಲ್ಲಿ ಇರುವುದಿಲ್ಲ ಹಾಗೂ ಮಾಸಿಕ ಬಿಲ್ಲುಗಳಲ್ಲಿ 5%ರಷ್ಟು ವಿನಾಯಿತಿ ನೀಡುವ ಅಗತ್ಯ ಇರುವುದಿಲ್ಲ. ಇವೆಲ್ಲವನ್ನು ಎರಡನೇ ಎದುರುದಾರರು ಅವಲೋಕಿಸಿ ಆದೇಶಿಸಿರುತ್ತಾರೆ. ಆದ್ದರಿಂದ ಎರಡನೇ ಎದುರುದಾರರು ಮಾಡಿರುವ ಆದೇಶವು ಕಾನೂನು ಅನ್ವಯ ಸಮಂಜಸವಾಗಿರುತ್ತದೆ. ಆದ್ದರಿಂದ ಅಪೀಲುದಾರರು ಸಲ್ಲಿಸಿರುವ ಮೇಲ್ಕಂಡ ಅಪೀಲು ಅರ್ಜಿಯು ಊರ್ಜಿತವಾಗತಕ್ಕದ್ದಲ್ಲವೆಂದು ನಿರ್ಧರಿಸಿರುತ್ತೇನೆ. ಎರಡನೇ ಎದುರುದಾರರು ಪ್ರಶ್ನಿತ ಆದೇಶದಲ್ಲಿ ನೀಡಿರುವ ತೀರ್ಪು ಕಾನೂನು ಅನ್ವಯ ಸಮಂಜಸವಾಗಿದ್ದು ಅದರಲ್ಲಿ ಈ ಪ್ರಾಧಿಕಾರದ ಹಸ್ತಕ್ಷೇಪದ ಅಗತ್ಯ ಇರುವುದಿಲ್ಲ ಎಂದು ಅಭಿಪ್ರಾಯ ಪಡುತ್ತಾ ಒಂದನೇ ಅಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

35) **ಅಂಶ 2: -** ಈಗಾಗಲೇ ಈ ಮೇಲೆ ಅಂಶ 1ರಲ್ಲಿ ಚರ್ಚಿಸಿದ ಕಾರಣಗಳಿಗಾಗಿ ಅಪೀಲುದಾರರು ದಿನಾಂಕ 05.12.2020ರಂದು ಅಂತಿಮ

ಕಂದಾಯ ನಿರ್ಧರಣಾ ಆದೇಶದ ಅನ್ವಯ ಹಿಂದಾಕರಣೆ ಬಿಲ್ ಮೊತ್ತವನ್ನು ಪಾವತಿಸಬೇಕಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಮಾಡುತ್ತಿದ್ದೇನೆ.

**ಸಂಖ್ಯೆ: OMB/H/G-432/2021/D-10 ದಿನಾಂಕ: 02.02.2022**

# <u>ಆದೇಶ</u>

ಅಪೀಲನ್ನು ವಜಾಮಾಡಲಾಗಿದೆ.

ಪ್ರಕರಣ ಸಂಖ್ಯೆ: 253/2021, ಆದೇಶ ಸಂಖ್ಯೆ: ಅಇಂ(ವಿ)/ ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-53/2021/CYS-11ರಲ್ಲಿ ಎರಡನೇ ಪ್ರತಿವಾಧಿಯು ದಿನಾಂಕ 07.04.2021 ರಂದು ಮಾಡಿರುವ ಆದೇಶವನ್ನು ಸ್ಥಿರಗೊಳಿಸಲಾಗಿದೆ.

ಸಹಿ/-
(ಆರ್. ಶಾರದಾ)
ವಿದ್ಯುಚ್ಛಕ್ತಿ ಲೋಕಪಾಲರು

**<u>ಪ್ರತಿಯನ್ನು:</u>**

1) ಶ್ರೀ ಅಶೋಕ್ ಆರ್. ನೀಲಿ,
ಮೆ. ಮಂತ್ರ ರೆಸಿಡೆನ್ಸಿ,
ಹಳೇ ಬಸ್ ನಿಲ್ದಾಣದ ಹಿಂಭಾಗ,
<u>ಹುಬ್ಬಳ್ಳಿ.</u>

2) ಶ್ರೀ ತುಷಾರ್ ಎಂ ಬದ್ದಿ
ಅರಿಹಂತ ಪಾರ್ಕ್,
ಕೇಶ್ವಾಪುರ,
<u>ಹುಬ್ಬಳ್ಳಿ – 580023.</u>

3) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನ ನಗರ ಉಪ ವಿಭಾಗ-3, ಹೆಸ್ಕಾಂ,
2ನೇ ಗೇಟ್, ಇನ್‌ಡಸ್ಟ್ರೀಯಲ್ ಎಸ್ಟೇಟ್,
<u>ಹುಬ್ಬಳ್ಳಿ.</u>

4) ಶ್ರೀ ಹೆಚ್.ವಿ. ದೇವರಾಜ್, ವಕೀಲರು,
ನಂ. 39, ಶಾಪ್ ನಂ. 24,
ಮೆಜನೇನ್ ಫ್ಲೋರ್,
ಎ.ಎಸ್.ವಿ.ಎನ್.ವಿ. ಭವನ, ಕೆ.ಜಿ. ರಸ್ತೆ,
ಬೆಂಗಳೂರು-560009.

5) ಅಧ್ಯಕ್ಷರು,
ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ,
ಕಾರುಯ ಮತ್ತು ಪಾಲನ ವೃತ್ತ,
ಶಿವಗಂಗಾ ಲೇಔಟ್, ಕೇಶ್ವಾಪುರ
ಹುಬ್ಬಳ್ಳಿ – 560023.

6) ಮಾನ್ಯ ಅಧ್ಯಕ್ಷರು, ಕವಿನಿಆ ರವರ ಆಪ್ತ ಕಾರ್ಯದರ್ಶಿ
7) ಮಾನ್ಯ ಸದಸ್ಯರು (M), ಕವಿನಿಆ ರವರ ಆಪ್ತ ಕಾರ್ಯದರ್ಶಿ
8) ಮಾನ್ಯ ಸದಸ್ಯರು (R), ಕವಿನಿಆ ರವರ ಆಪ್ತ ಕಾರ್ಯದರ್ಶಿ
9) ಕಾರ್ಯದರ್ಶಿ, ಕವಿನಿಆ ರವರ ಆಪ್ತ ಸಹಾಯಕರು.